ವಿಜಯವಾಣಿ
• VIJAYAVANI » MANGALURU
10
ಶನಿವಾರ
7 ಜುಲೈ 2018
7 JULY 2018
ಪ್ರದೇಶ ಸಮಾಚಾರ

ಡಾ. ವಿಜಯ ಸಂಕೇಶ್ವರ ಸಾರಥ್ಯದಲ್ಲಿ
ದಿಗ್ವಿಜಯ 24X7 NEWS
DIGHVIJAY
ನಿಮಿಷ
ಸು
ರಾಜ್ಯ

# ಎಳೆ ಅಡಕೆ ಉದುರುವ ರೋಗ

## ಕೀಟ ಬಾಧೆ, ಕೊಳೆರೋಗ ಶಂಕೆ | ಬೋರ್ಡೋ ದ್ರಾವಣ ಸಿಂಪಡಿಸದಿರುವುದೂ ಸಮಸ್ಯೆ

■ ಶ್ರವಣ್‌ಕುಮಾರ್ ನಾಳ ಪುತ್ತೂರು/ನಿಶಾಂತ್ ಬಿಲ್ಲಂಪದವು ವಿಟ್ಲ

ಜೂನ್ ಆರಂಭದಿಂದ ಕರಾವಳಿಯಾದ್ಯಂತ ಅತಿವೃಷ್ಟಿಯಾಗಿದ್ದು, ಈಗ ಅಡಕೆ ತೋಟಗಳಲ್ಲಿ ಕೊಳೆರೋಗದ ಜತೆ ನಿಗೂಢ ರೋಗವೊಂದು ಕಾಣಿಸಿಕೊಂಡಿದ್ದು ಬೆಳೆಗಾರರಲ್ಲಿ ಆತಂಕ ಸೃಷ್ಟಿಯಾಗಿದೆ.

ವಿವಿ ಫೋಕಸ್ ಸ್ಟೋರಿ

ಪ್ರಸಕ್ತ ಸುಳ್ಯ, ಪುತ್ತೂರು, ವಿಟ್ಲ, ಬೆಳ್ತಂಗಡಿಯ ಕೆಲವು ತೋಟಗಳಲ್ಲಿ ಹಳದಿ ಬಣ್ಣಕ್ಕೆ ತಿರುಗಿದ ಎಳೆ ಅಡಕೆ ಕಾಯಿ ಉದುರುವ ರೋಗ ಕಾಣಿಸಿಕೊಂಡಿದೆ. ಕೊಳೆರೋಗದಲ್ಲಿ ಅಡಕೆ ಕೊಳೆತು ಉದುರಿದರೆ, ಇನ್ನೊಂದು ನಿಗೂಢ ರೋಗದಲ್ಲಿ ಕೊಳೆಯದೆ ಅಡಕೆ ಉದುರುತ್ತಿದೆ. ಇದಕ್ಕೆ ತಿಗಣೆ ಜಾತಿಯ ಕೀಟ ಕಾರಣ ಎನ್ನುತ್ತಾರೆ ಸಿಪಿಸಿಆರ್‌ಐ ವಿಜ್ಞಾನಿಗಳು.

ಕೀಟಬಾಧೆ-ಕೊಳೆರೋಗದ ವ್ಯತ್ಯಾಸ ತಿಳಿಯುವುದು ಬೆಳೆಗಾರರಿಗೆ ಸಾಧ್ಯವಾಗುತ್ತಿಲ್ಲ. ಕೀಟ ಬಾಧಿಸಿರುವ ತೋಟಗಳಲ್ಲಿ ಉದುರಿರಿರುವ ಎಳೆ ಅಡಕೆಗಳಲ್ಲಿ ಕೀಟಗಳು ಪತ್ತೆಯಾಗುತ್ತಿವೆ. ಈ ರೋಗ ದಕ್ಷಿಣ ಕನ್ನಡಕ್ಕೆ ಸೀಮಿತವಾಗಿಲ್ಲ, ಶಿರಸಿ ಭಾಗದಲ್ಲೂ ಕಾಣಿಸಿಕೊಂಡಿದೆ. ಈಗಾಗಲೇ ಸೂಚಿಸಿರುವ ಔಷಧದಿಂದ ನಿಯಂತ್ರಿಸಬಹುದಾಗಿದೆ. ಹೆಚ್ಚಿನ ಸಂಶೋಧನೆ ವಿಟ್ಲ ಸಿಪಿಸಿಆರ್‌ಐನಲ್ಲಿ ನಡೆಯುತ್ತಿದೆ ಎಂದು 'ವಿಜಯವಾಣಿ'ಗೆ ವಿಜ್ಞಾನಿಗಳು ತಿಳಿಸಿದ್ದಾರೆ.

ಕೀಟ ನಿಯಂತ್ರಣಕ್ಕೆ ಥಯಮಿಥಾಕ್ಸನ್ 25 ಡಬ್ಲ್ಯುಜಿ ಕೀಟನಾಶಕ ಸಿಂಪಡಣೆ ಮಾಡಬಹುದು, ಆದರೆ ಇದನ್ನು ಏಪ್ರಿಲ್ ತಿಂಗಳಲ್ಲೇ ಮಾಡಬೇಕಾಗಿತ್ತು. ಕೆಲವು ಭಾಗದಲ್ಲಿ ಈಗಲೂ ಇದರ ಸಿಂಪಡಣೆ ಮಾಡಲಾಗುತ್ತಿದೆ. ಯಾವ ರೀತಿಯ ಔಷಧಗಳನ್ನು ಸಿಂಪಡಿಸಿದರೂ ಪ್ರಯೋಜನಕ್ಕೆ ಬರುತ್ತಿಲ್ಲ ಎನ್ನುತ್ತಿದ್ದಾರೆ ಬೆಳೆಗಾರರು.

ಮಳೆ ಬಿಸಿಲಿನಾಟಕ್ಕೆ ಪರಾಗಸ್ಪರ್ಶ ಸರಿಯಾದ ರೀತಿಯಲ್ಲಿ ನಡೆಯದೆ ಕಾಯಿಗಳು ಬೀಳುತ್ತಿವೆ. ಅಕಾಲಿಕ ಮಳೆ ಸಂದರ್ಭ ಹಿಂಗಾರದೊಳಗೆ ನೀರು ನಿಂತು ಬಿಸಿಯಾಗಿ, ಎಳೆಕಾಯಿಯ ಮೇಲೆ ಪರಿಣಾಮ ಬೀರಿರುವ ಸಾಧ್ಯತೆಗಳೂ ಇವೆ.

**ಮದ್ದು ಸಿಂಪಡಣೆ ಆಗಿಲ್ಲ:** ಭಾರಿ ಮಳೆಯಿಂದಾಗಿ ಕೆಲವೆಡೆ ಸೂಕ್ತ ಸಮಯದಲ್ಲಿ ಅಡಕೆ ತೋಟಗಳಿಗೆ ಬೋರ್ಡೋ ದ್ರಾವಣ ಸಿಂಪಡಿಸಲು ಸಾಧ್ಯವಾಗಿಲ್ಲ. ಮಳೆ ಸಂದರ್ಭ ಕಾರ್ಮಿಕರೂ ಅಡಕೆ ಮರ ಏರಲು ಹಿಂದೇಟು ಹಾಕುತ್ತಿದ್ದಾರೆ. ಈಗಷ್ಟೇ ಕೊಳೆರೋಗ ಆರಂಭವಾಗುತ್ತಿದೆ. ಈಗಲೂ ಬಿಸಿಲಿನ ಸಂದರ್ಭ ಬೋರ್ಡೋ ದ್ರಾವಣ ಸಿಂಪಡಿಸಿದರೆ ರೋಗ ನಿಯಂತ್ರಣಕ್ಕೆ ತರಲು ಸಾಧ್ಯ ಎಂದು ಕೃಷಿತಜ್ಞ ಕುಮಾರ್ ಪೆರ್ನಾಜೆ 'ವಿಜಯವಾಣಿ'ಗೆ ತಿಳಿಸಿದ್ದಾರೆ.

ಮದ್ದು ಸಿಂಪಡಣೆಗೆ ಸಿದ್ಧತೆ ನಡೆಸಿದವರಿಗೆ ಜಡಿಮಳೆ ಅಡ್ಡಿಯಾಗಿತ್ತು. ಮಳೆ ಕಡಿಮೆಯಾಗಿ ಬಿಸಿಲು ಕಾಣಿಸಿಕೊಂಡಾಗ ಮದ್ದು ಸಿಂಪಡಿಸುವ ಕಾರ್ಮಿಕರು ಸಿಕ್ಕಿಲ್ಲ ಎನ್ನುವುದು ಬೆಳೆಗಾರರ ಅಳಲು. ಬೇಸಿಗೆಯಲ್ಲಿ ನೀರಿಲ್ಲದೆ ಬರಡಾಗಿದ್ದ ಅಡಕೆ ತೋಟಗಳಿಗೆ ಈ ಬಾಧೆ ತುಸು ಕಡಿಮೆ. ಬೇಸಿಗೆಯಲ್ಲಿ ಯಥೇಚ್ಛವಾಗಿ ನೀರು ಹಾಯಿಸಿದ ತೋಟಗಳಲ್ಲಿ, ನೇತ್ರಾವತಿ ಹಾಗೂ ಕುಮಾರಧಾರಾ ನದಿತಟದ ಭಾಗಗಳಲ್ಲಿ ರೋಗ ಹೆಚ್ಚು ಕಾಣುತ್ತಿದೆ.





ಅಡಕೆ ತೋಟಗಳಲ್ಲಿ ನಳ್ಳಿ ಉದುರುತ್ತಿರುವುದು.

### ಕೊಳೆರೋಗಕ್ಕೆ ಪರಿಹಾರ ಇಲ್ಲ

ಬಿಸಿಲು, ನೀರಿನ ಅಭಾವ, ಹಳದಿ ರೋಗ, ಕೊಳೆರೋಗ ಬಾಧೆ ಸೇರಿ ನಷ್ಟಕ್ಕೆ ಈಡಾಗುವ ಅಡಕೆ ಪ್ರಮಾಣ ಶೇ.50ಕ್ಕಿಂತ ಅಧಿಕ. ಕೊಳೆರೋಗ ಬೆಳೆಹಾನಿಗೆ ಪರಿಹಾರ ನೀಡುವ ಪ್ಯಾಕೇಜ್ ಪರಿಹಾರ ಮೊತ್ತ 3 ವರ್ಷ ಹಿಂದೆ ಸರ್ಕಾರ ಬಿಡುಗಡೆಯಾಗಿತ್ತು. ಅದು ಬಿಟ್ಟರೆ ಕೊಳೆರೋಗಕ್ಕೆ ಪರಿಹಾರ ನೀಡಲಾಗುತ್ತಿಲ್ಲ. ಹವಾಮಾನ ಬೆಳೆ ವಿಮೆ ಯೋಜನೆಯಡಿ, ಅಡಕೆ ಮತ್ತು ಕರಿಮೆಣಸಿಗೆ ಬೆಳೆ ವಿಮೆ ಯೋಜನೆಯಿದ್ದರೂ ಕೊಳೆರೋಗಕ್ಕೆ ಇಲ್ಲ. ಆಯಾ ಗ್ರಾಪಂ ವ್ಯಾಪ್ತಿಯಲ್ಲಿ ಮಳೆ, ಬಿಸಿಲು ಸಮರ್ಪಕವಾಗಿ ದಾಖಲಾಗದಿದ್ದರೆ, ಹವಮಾನ ವರದಿ ಆಧರಿಸಿ ರೈತನಿಗೆ ಬೆಳೆ ವಿಮೆ ಪಾವತಿ ಮಾಡುವುದು ರೂಢಿ.



"ಎಳೆ ಅಡಕೆ ಉದುರುತ್ತಿರುವ ಬಗ್ಗೆ ದೂರುಗಳು ಬರುತ್ತಿವೆ. ಈ ಬಗ್ಗೆ ಪರೀಕ್ಷೆ ನಡೆಸಿದಾಗ ಹೆಚ್ಚಿನ ತೋಟದಲ್ಲಿ ತಿಗಣೆ ಜಾತಿಯ ಕೀಟ ಬಾಧೆಯಿಂದಲೇ ಬೀಳುತ್ತಿರುವುದು ಕಾಣಿಸಿದೆ. ಹೆಚ್ಚಿನ ಪ್ರಮಾಣದಲ್ಲಿ ಎಳೆ ಅಡಕೆ ಬೀಳುತ್ತಿರುವುದರಿಂದ ಬೇರೆ ಕೀಟ ಬಾಧೆ ಇದೆಯಾ ಎಂಬ ಬಗ್ಗೆ ಸಂಶೋಧನೆ ನಡೆಸಲಾಗುತ್ತಿದೆ.

| **ವಿನಾಯಕ ಹೆಗಡೆ** ಮುಖ್ಯಸ್ಥರು, ಸಸ್ಯ ಸಂರಕ್ಷಣಾ ವಿಭಾಗ ಸಿಪಿಸಿಆರ್‌ಐ, ಕಾಸರಗೋಡು



"ಒಂದೆಡೆ ಅಡಕೆ ಬೆಲೆ ಏರಿಕೆಯಾಗಿಲ್ಲ, ಇನ್ನೊಂದೆಡೆ ಕೊಳೆರೋಗ ಕಾಟ. ಇದೆಲ್ಲ ಸಮಸ್ಯೆಗಳಿಂದ ಅಡಕೆ ಬೆಳೆಗಾರರು ಕಂಗಾಲಾಗಿದ್ದಾರೆ. ಪ್ರಸ್ತುತ ಅಡಕೆ ತೋಟಗಳಲ್ಲಿ ಕೊಳೆರೋಗ ಲಕ್ಷಣ ಗೋಚರವಾಗಿದ್ದರೂ, ಮಳೆ ಬಿಡುವಿನ ಸಂದರ್ಭ ಬೋರ್ಡೋ ದ್ರಾವಣ ಸಿಂಪಡಿಸುವುದರಿಂದ ರೋಗ ನಿಯಂತ್ರಣಕ್ಕೆ ತರಲು ಸಾಧ್ಯ.

| **ಕುಮಾರ್ ಪೆರ್ನಾಜೆ** ಕೃಷಿಕ ಹಾಗೂ ಅಡಕೆ ತೋಟಗಾರಿಕಾ ತಜ್ಞ, ಪುತ್ತೂರು



"ಕೀಟಬಾಧೆ ಈ ವರ್ಷ ಹೆಚ್ಚಾಗಿದೆ. ಸಮಸ್ಯೆ ಬಗ್ಗೆ ರೈತರಿಂದ ಹಲವು ದೂರುಗಳು ಬಂದಿದ್ದು, ವಿಜ್ಞಾನಿಗಳನ್ನು ಕಳುಹಿಸಿ ವೈಜ್ಞಾನಿಕ ಪರೀಕ್ಷೆ ನಡೆಸುತ್ತಿದ್ದೇವೆ. ಕೆಲವು ಕಡೆಯಲ್ಲಿ ಔಷಧಗಳನ್ನು ಸೂಚಿಸಿದ್ದು, ಪರಿಣಾಮವನ್ನೂ ಕೊಡುತ್ತಿದೆ. ಒಟ್ಟು ಸರ್ವೆಗಳನ್ನು ಮಾಡಲಾಗುತ್ತಿದ್ದು, ಪೂರ್ಣಗೊಂಡ ಬಳಿಕ ವರದಿ ಸಿದ್ಧಪಡಿಸಲಾಗುವುದು.

| **ಡಾ.ಪಿ.ಚೌಡಪ್ಪ** ನಿರ್ದೇಶಕರು, ಸಿಪಿಸಿಆರ್‌ಐ, ಕಾಸರಗೋಡು



"ಹೆಚ್ಚಿನ ಅಡಕೆ ತೋಟದಲ್ಲಿ ಎಳೆ ಅಡಕೆ ಬೀಳುತ್ತಿದ್ದು, ಫಸಲ್ ಭೀಮಾ ಯೋಜನೆಯ ಪ್ರಯೋಜನ ಪಡೆಯಲು ಆಗಸ್ಟ್ 31ರವರೆಗೆ ಅವಕಾಶ ಒದಗಿಸಬೇಕಾಗಿದೆ. ಈಗಿನ ವಿಮಾ ಕಂತನ್ನು ಅಡಕೆ ಬೆಳೆಗಾರರಿಗೆ ತಗ್ಗಿಸಬೇಕು. ಲೋಕಸಭಾ ಸದಸ್ಯರು ಕೇಂದ್ರ ಸರ್ಕಾರದ ಗಮನಕ್ಕೆ ತಂದು ತಿದ್ದುಪಡಿ ಮಾಡುವ ಕಾರ್ಯ ಮಾಡಬೇಕು.

| **ಶ್ರೀಧರ ಶೆಟ್ಟಿ ಬೈಲುಗುತ್ತು** ಜಿಲ್ಲಾಧ್ಯಕ್ಷ, ರಾಜ್ಯ ರೈತ ಸಂಘ ಹಸಿರು ಸೇನೆ, ದ.ಕ.